# ಅನಾಥಾಲಯಗಳಲ್ಲೂ ಅಕ್ರಮ!

ದೇಶವ್ಯಾಪಿ ಆತಂಕಕ್ಕೆ, ಆಕ್ರೋಶಕ್ಕೆ ಕಾರಣವಾಗಿದ್ದ ಅಸಹಾಯಕ ಅನಾಥ ಮಕ್ಕಳ ಅಕ್ರಮ ಸಾಗಣೆಗೆ ಕಡಿವಾಣ ಹಾಕಲು ಇದೀಗ ಸುಪ್ರೀಂಕೋರ್ಟ್ ಕಣಕ್ಕಿಳಿದಿದೆ. ತಮ್ಮ ರಾಜ್ಯದಲ್ಲಿರುವ ಅನಾಥಾಲಯಗಳ ಪರಿಸ್ಥಿತಿಯನ್ನು ಅವಲೋಕಿಸಿ ವರದಿ ನೀಡುವಂತೆ ಎಲ್ಲ ರಾಜ್ಯ ಸರ್ಕಾರಗಳಿಗೆ ಸುಪ್ರೀಂ ಕೋರ್ಟಿನ ಪೀಠವೊಂದು ಆದೇಶಿಸಿದೆ. ಆ ಮೂಲಕ ಹಣದ ದಾಹಕ್ಕೆ ಪುಟ್ಟ ಮಕ್ಕಳ ಭವಿಷ್ಯವನ್ನೇ ಅಂಧಕಾರಕ್ಕೆ ತಳ್ಳುವವರಿಗೆ ಮೂಗುದಾರ ಹಾಕುವ ನಿಟ್ಟಿನಲ್ಲಿ ಸ್ವಾಗತಾರ್ಹ ಹೆಜ್ಜೆಯಿಟ್ಟಿದೆ.

ಹಣದಾಸೆಯಿಂದ ಸುಮಾರು 17 ಶಿಶುಗಳನ್ನು ವಿದೇಶಿ ದಂಪತಿಗಳಿಗೆ, ದತ್ತು ನೀಡುವ ಹೆಸರಿನಲ್ಲಿ ಮಾರಾಟ ಮಾಡಿ, ಮಾನವ ಹಕ್ಕುಗಳನ್ನು ಗಾಳಿಗೆ ತೂರಿದ್ದ ಘಟನೆ ಕಳೆದ ವರ್ಷ ಪಶ್ಚಿಮ ಬಂಗಾಳದ ಜಲಪೈಗುರಿಯ ಅನಾಥಾಶ್ರಮದಲ್ಲಿ ಸಂಭವಿಸಿತ್ತು. 'ಈ ಪ್ರಕರಣ ರಾಜ್ಯ ಮಾನವ ಹಕ್ಕು ಅಯೋಗಕ್ಕೆ ಸೇರಿದ್ದು' ಎಂಬ ಪಶ್ಚಿಮ ಬಂಗಾಳದ ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ ರಾಷ್ಟ್ರೀಯ ಮಕ್ಕಳ ಹಕ್ಕು ರಕ್ಷಣಾ ಆಯೋಗವು ಸುಪ್ರೀಂ ಕೋರ್ಟ್ ಮೆಟ್ಟಿಲೇರಿತ್ತು. ಜೊತೆಗೆ ವಿದೇಶಿ ದಂಪತಿಗಳಿಗೆ ಅಕ್ರಮವಾಗಿ ಮಾರಾಟ ಮಾಡಿದ್ದರಿಂದ ಇದು ಅಂತರರಾಷ್ಟ್ರೀಯ ಮಾನವ ಸಾಗಣೆ ಅಡಿಯಲ್ಲಿ ಬರುತ್ತದೆ ಎಂದು ಆಯೋಗವು ವಾದಿಸಿತ್ತು. ಈ ವಿಶೇಷ ರಜಾ ಅರ್ಜಿಯ ವಿಚಾರಣೆ ನಡೆಸಿದ ಪೀಠ, 'ಇದು ರಾಷ್ಟ್ರೀಯ ಸಮಸ್ಯೆ. ಎಲ್ಲಾ ರಾಜ್ಯ ಸರ್ಕಾರಗಳನ್ನೂ ಈ ಪ್ರಕರಣದಲ್ಲಿ ವಾದಿಗಳನ್ನಾಗಿಸಬೇಕು' ಎಂದು ಸೂಚಿಸಿದೆ.

'ಅಪಾಯಕಾರಿ ಉದ್ಯೋಗಗಳಲ್ಲಿ ಮಕ್ಕಳನ್ನು ದುಡಿಸಿಕೊಳ್ಳುವುದನ್ನು ನಿಷೇಧಿಸುವ ಕಾನೂನು ಈಗಾಗಲೇ ಜಾರಿಯಲ್ಲಿದೆ. ಹೀಗಿರುವಾಗ ಅನಾಥಾಶ್ರಮದ ಮೇಲುಸ್ತುವಾರಿ ನೋಡಿಕೊಳ್ಳುವವರೇ ಮಕ್ಕಳನ್ನು ಮಾರಾಟ ಮಾಡಿ ಪುಟ್ಟ ಮಕ್ಕಳನ್ನು ವ್ಯಾಪಾರಿ ಸರಕನ್ನಾಗಿ ಮಾಡಿದ್ದು ಅತ್ಯಂತ ದುರದೃಷ್ಟಕರ. ದೇಶದ ಭವಿಷ್ಯ ಎಂದೇ ಬಣ್ಣಿಸಲಾಗುವ ಮಕ್ಕಳ ಹಕ್ಕನ್ನೇ ಮೊಟಕುಗೊಳಿಸುವ ಇಂತಹ ಘಟನೆ ದೇಶಕ್ಕೇ ಅತ್ಯಂತ ವಿಪತ್ಕಾರಿ' ಎಂದು ಕೋರ್ಟ್ ಪೀಠ ಬಣ್ಣಿಸಿರುವುದರಲ್ಲಿ ಅತಿಶಯೋಕ್ತಿಯೇನಿಲ್ಲ.

ದೇಶದಲ್ಲಿ ನಾಯಿಕೊಡೆಗಳಂತೆ ಅನಾಥಾಶ್ರಮಗಳು ಹುಟ್ಟಿಕೊಂಡಿವೆ. ಎರಡು ವರ್ಷಗಳ ಹಿಂದೆ ನಡೆದ ಒಂದು ಸಮೀಕ್ಷೆಯ ಪ್ರಕಾರ ಶೇ.10ರಷ್ಟು ಅನಾಥಾಶ್ರಮಗಳು ಮಾತ್ರ ನೋಂದಣಿ ಮಾಡಿಸಿಕೊಂಡಿವೆ. ಇವುಗಳಲ್ಲೂ ಸಂಬಂಧಿಸಿದ ಅಧಿಕಾರಿಗಳಿಗೆ ಲಂಚ ನೀಡಿ ಪರವಾನಗಿ ಪಡೆದುಕೊಂಡ ಅಶ್ರಮಗಳೇ ಅಧಿಕ. ನಿಯಮಗಳ ಪ್ರಕಾರ ವಸತಿ, ಆಹಾರ, ಮೂಲಸೌಲಭ್ಯ, ಮಾನವ ಸಂಪನ್ಮೂಲ ಸೇವೆ, ಆರೋಗ್ಯ ಸೇವೆಯನ್ನು ಅನಾಥ ಮಗುವಿಗೆ 18 ವರ್ಷ ವಯಸ್ಸಾಗುವವರೆಗೂ ನೀಡಬೇಕು. ಆದರೆ ಎಷ್ಟು ಅನಾಥಾಲಯಗಳಲ್ಲಿ ಈ ಸೇವೆಯನ್ನು ಒದಗಿಸಲಾಗುತ್ತಿದೆ? ದಾನ– ಧರ್ಮದ ಹೆಸರಲ್ಲಿ, ಸ್ವಯಂ ಸೇವಾ ಸಂಸ್ಥೆಯ ಹೆಸರಲ್ಲಿ ಅನಾಥಾಲಯ ನಡೆಸುವ ಕೆಲವು ಲಾಭಕೋರರು ವಿದೇಶಗಳಿಂದ ಅಪಾರ ವಂತಿಗೆ ಪಡೆದು ವಂಚಿಸುತ್ತಿರುವುದೂ ಬೆಳಕಿಗೆ ಬಂದಿದೆ. ಇವುಗಳಲ್ಲಿ ಹಲವು ಸಂಸ್ಥೆಗಳು ವಿದೇಶಿ ವಂತಿಗೆ ನಿಯಂತ್ರಣ ಕಾಯ್ದೆಯಡಿ ನೋಂದಣಿ ಮಾಡಿಕೊಂಡಿಲ್ಲ ಎಂಬುದೂ ಗಮನಾರ್ಹ.

ಲೈಂಗಿಕ ಕಿರುಕುಳ ಸೇರಿದಂತೆ ಮಕ್ಕಳನ್ನು ಶೋಷಿಸುವ ಬಹುತೇಕ ಪ್ರಕರಣಗಳು ವರದಿಯಾಗಿದ್ದೂ ಅನಾಥಾಲಯಗಳಲ್ಲೇ. ಮದುವೆ ಹೆಸರಲ್ಲೂ ಈ ಅಕ್ರಮಗಳು ಕದ್ದುಮುಚ್ಚಿ ನಡೆಯುತ್ತಿವೆ. ವಿದೇಶಿ ದಂಪತಿಗಳು ಸೇರಿದಂತೆ ಹಲವರು ದತ್ತು ಪಡೆದ ಮಕ್ಕಳ ಮೇಲೆ ದೌರ್ಜನ್ಯ ಎಸಗುವುದು, ಮನೆಗೆಲಸಕ್ಕೆ ಬಳಸಿಕೊಳ್ಳುವುದು, ದೈಹಿಕ ಹಿಂಸೆ ನೀಡುವಂತಹ ಪ್ರಕರಣಗಳು ಹಲವೆಡೆ ಬಹಿರಂಗಗೊಂಡಿವೆ.

ಇಂತಹ ಅನಾಥಾಲಯಗಳ ಕಾರ್ಯವೈಖರಿ, ದತ್ತು ಪ್ರಕ್ರಿಯೆ, ಅವುಗಳ ಹಿಂದಿನ ಉದ್ದೇಶ, ಮಕ್ಕಳಿಗೆ ಅಲ್ಲಿ ನೀಡುವಂತಹ ಸೌಲಭ್ಯ, ಅವರನ್ನು ನೋಡಿಕೊಳ್ಳುವ ವಿಧಾನಗಳೆಲ್ಲವೂ ಪಾರದರ್ಶಕ ಚೌಕಟ್ಟಿನಲ್ಲಿರಬೇಕು. ಇವುಗಳ ಮೇಲೆ ನಿಗಾ ಇಡುವ ಮಕ್ಕಳ ಕಲ್ಯಾಣ ಸಮಿತಿಗಳು ಕಾಲಕಾಲಕ್ಕೆ ಪರಿಶೀಲನೆ ನಡೆಸಬೇಕು. ದುರದೃಷ್ಟಕರವೆಂದರೆ ಇಂತಹ ಸಮಿತಿಗಳು ತಮ್ಮ ಕರ್ತವ್ಯವನ್ನು ಪ್ರಾಮಾಣಿಕವಾಗಿ ನಿಭಾಯಿಸದೇ ಮುಗ್ಧ ಮಕ್ಕಳ ಹಕ್ಕುಗಳಿಗೆ ಮಾತ್ರವಲ್ಲ, ಘನತೆಗೂ ಚ್ಯುತಿ ತರುವಂತಹ ಹೀನ ಘಟನೆಗಳಿಗೆ ಪರೋಕ್ಷವಾಗಿ ಕಾರಣವಾಗಿವೆ.

ಇದೇ ಸಂರ್ಭದಲ್ಲಿ ಸುಪ್ರೀಂ ಕೋರ್ಟ್ ಪೀಠ 'ಮಾನವ ಹಕ್ಕು ಕುರಿತ ಕೋರ್ಟ್' ಸ್ಥಾಪನೆಯ ಬಗ್ಗೆಯೂ ಪ್ರಸ್ತಾವ ಮಾಡಿದೆ. ಮಾನವ ಹಕ್ಕು ರಕ್ಷಣೆ ಕಾಯ್ದೆ (1993)ರ ಪ್ರಕಾರ ಇಂತಹ ಪ್ರತ್ಯೇಕ ಕೋರ್ಟ್ ಸ್ಥಾಪನೆ ಕಡ್ಡಾಯ. ಪ್ರತಿ ಜಿಲ್ಲೆಯಲ್ಲೂ ಒಂದು ಸೆಶನ್ಸ್ ಕೋರ್ಟ್ ಅನ್ನು ಮಾನವ ಹಕ್ಕು ಉಲ್ಲಂಘನೆ ಪ್ರಕರಣಗಳ ವಿಚಾರಣೆ ನಡೆಸಲು ಮೀಸಲಿಡಬೇಕು; ಇದಕ್ಕೆ ಒಬ್ಬರು ಪಬ್ಲಿಕ್ ಪ್ರಾಸಿಕ್ಯೂಟರ್‌ಅನ್ನು ನೇಮಿಸಬೇಕು ಎಂದು ಪೀಠ ಆದೇಶ ಹೊರಡಿಸಿರುವುದು ಮಕ್ಕಳ ಹಕ್ಕನ್ನು ಕಾಪಾಡುವ ನಿಟ್ಟಿನಲ್ಲಿ ಒಂದು ದಿಟ್ಟ ಹೆಜ್ಜೆ. ಕೋರ್ಟ್‌ನ ಆದೇಶ ಸೂಕ್ತ ರೀತಿಯಲ್ಲಿ ಜಾರಿಯಾದರೆ ಈ ಅನಾಥ ಮುಗ್ಧ ಮಕ್ಕಳ ಕಂಗಳಲ್ಲಿ ಭವಿಷ್ಯದ ಬೆಳಕು ಗೋಚರಿಸಲು ಸಾಧ್ಯ.

■ ಸುಧಾ ಹೆಗಡೆ

ದೇಶದಲ್ಲಿ ನಾಯಿಕೊಡೆಗಳಂತೆ ಅನಾಥಾಶ್ರಮಗಳು ಹುಟ್ಟಿಕೊಂಡಿವೆ. ಎರಡು ವರ್ಷಗಳ ಹಿಂದೆ ನಡೆದ ಒಂದು ಸಮೀಕ್ಷೆಯ ಪ್ರಕಾರ ಶೇ.10ರಷ್ಟು ಅನಾಥಾಶ್ರಮಗಳು ಮಾತ್ರ ನೋಂದಣಿ ಮಾಡಿಸಿಕೊಂಡಿವೆ. ಇವುಗಳಲ್ಲೂ ಸಂಬಂಧಿಸಿದ ಅಧಿಕಾರಿಗಳಿಗೆ ಲಂಚ ನೀಡಿ ಪರವಾನಗಿ ಪಡೆದುಕೊಂಡ ಆಶ್ರಮಗಳೇ ಅಧಿಕ. ಇಲ್ಲಿ ನಡೆಯುವ ಅಕ್ರಮಗಳಿಗೆ ಮೂಗುದಾರ ಹಾಕುವ ಕುರಿತು ಇದೀಗ ಸುಪ್ರೀಂಕೋರ್ಟ್ ಸ್ವಾಗತಾರ್ಹ ಹೆಜ್ಜೆಯಿಟ್ಟಿದೆ.

